## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ

**ಸಿ.ಸಿ ಸಂಖ್ಯೆ: 201/2024**

| | | |
|---|---|---|
| ಹೆಸರು | ಶ್ರೀ ನಾಗರಾಜು | ಚಾಸಾಃ 01 |
| ತಂದೆ ಹೆಸರು | ಶ್ರೀ ದೇವಶೆಟ್ಟಿ | ಫ್ರಾಸಾಃ 01 |
| ವಯಸ್ಸು | 48 ವರ್ಷ | ಸಾಕ್ಷಿಯನ್ನು ದಿನಾಂಕಃ 30.09.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಕೂಲಿ | |
| ವಾಸ | ಚಿಕ್ಕಬೇಗೂರು ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಚಾಸ–2 ನನ್ನ ಹೆಂಡತಿ. 1ನೇ ಆರೋಪಿ ನನ್ನ ಮಾವ. ಎರಡನೇ ಆರೋಪಿ ನನ್ನ ಅತ್ತೆ. ಸುಮಾರು 2 ವರ್ಷಗಳ ಹಿಂದೆ ಚಾಸ–2 ಮತ್ತು ಆರೋಪಿಗಳ ನಡುವೆ ಜಗಳವಾಗಿತ್ತು. ಆರೋಪಿಗಳು ಬಾಡ್ಲಿಯಿಂದ ಚಾಸ–2 ರವರಿಗೆ ಹಲ್ಲೆ ಮಾಡಿದ್ದರು. ನಂತರ ನಾನು ನಂಜನಗೂಡು ಆಸ್ಪತ್ರೆಗೆ ಚಾಸ–2 ರವರನ್ನು ಕರೆದುಕೊಂಡು ಹೋದೆ. ನಂತರ ದೂರು ನೀಡಿದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಚಾಸ–2 ರವರ ಬಲಗೈನ ಹೆಬ್ಬೆರಳು ಗಾಯವಾಗಿತ್ತು. ಸಾಕ್ಷಿಯು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಹಲ್ಲೆ ಮಾಡಲು ಬಳಸಿದ ಪ್ಲಾಸ್ಟಿಕ್ ಬಾಡ್ಲಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರಮಾಣದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ಪುಟ್ಟಮಾದಮ್ಮರವರ ಖಾಲಿ ಜಾಗದಲ್ಲಿ ಅನುಮತಿಯ ಮೇರೆಗೆ ದನಕರುಗಳನ್ನು ಕಟ್ಟಿ ಹಾಕುತ್ತಿದ್ದೇವು ಎಂದರೆ ಸರಿಯಲ್ಲ. ದಿಃ 26.11.2023 ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಚಾಸಾ–2 ರವರು ಸದರಿ ಜಾಗದಲ್ಲಿ ದನಕರುಗಳನ್ನು ಕಟ್ಟಿಹಾಕಲು ಹೋಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ಆರೋಪಿಗಳು ಚಾಸ–2 ರವರನ್ನು ಶೆಡ್ಡಿನ ಪಕ್ಕದಲ್ಲಿ ದನಕರುಗಳನ್ನು ಕಟ್ಟಿಹಾಕಬಾರದು ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದರೆ ಸರಿ. ನಂತರ ಚಾಸ–2 ರವರು ಪುಟ್ಟಮಾದಮ್ಮರವರ ಖಾಲಿ ಜಾಗದಲ್ಲಿ ಅನುಮತಿ ಪಡೆದು ಕಟ್ಟಿ ಹಾಕುತ್ತಿದ್ದೇವೆ ಎಂದು ಹೇಳಿದರು ಎಂದರೆ ಸರಿ. ಚಾಸ–2 ರವರು ಏಕೆ ತೊಂದರೆ ಕೊಡುತ್ತೀದ್ದೀರಿ ಎಂದು ಕೇಳಿದಾಗ 1ನೇ ಆರೋಪಿ ಪ್ಲಾಸ್ಟಿಕ್ ಬಾಡ್ಲಿಯಿಂದ ಚಾಸ–2 ರವರಿಗೆ ತಲೆಗೆ ಮತ್ತು ಮೈಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. 2ನೇ ಆರೋಪಿ ಕೈಗಳಿಂದ ಚಾಸ–2 ರವರಿಗೆ ಗುದ್ದಿ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ.

ಗಲಾಟೆಯಾಗಿ ಚಾಸ–2 ರವರ ಕಪ್ಪುಮಣಿಸರ ಮತ್ತು ತಾಳಿ ಕಳೆದುಹೋಗಿರುತ್ತದೆ. ಅದು ಅಲ್ಲೆ ಬಿದ್ದು ಹೋಗಿತ್ತು ಮತ್ತು ಅದು ಸಿಗಲಿಲ್ಲ ಎಂದರೆ ಸರಿ. ನಾನು, ಚಾಸ–3 ಮತ್ತು 4 ರವರು ಜಗಳ ಬಿಡಿಸಿದೇವು ಎಂದರೆ ಸರಿ. ನನ್ನ ಹೆಂಡತಿಯ ಹೆಬ್ಬೆರಳು ಮತ್ತು ತಲೆಗೆ ಗಾಯಗಳಾಗಿದ್ದು ಎಂದರೆ ಸರಿ. ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು ಎಂದರೆ ಸರಿ. ಚಿಕಿತ್ಸೆ ಪಡೆಯುತ್ತಿದ್ದ ಕಾರಣ ದಿಃ 01.12.2023 ರಂದು ತಡವಾಗಿ ದೂರು ನೀಡಿದೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಗಲಾಟೆ ನಡೆದ ಸ್ಥಳ ನನ್ನ ದೊಡ್ಡಮ್ಮ ಪುಟ್ಟಮಾದಮ್ಮನವರಿಗೆ ಸೇರಿದ ಜಾಗ. ಸದರಿ ಜಾಗ 1ನೇ ಆರೋಪಿಯ ತಾಯಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ಸದರಿ ಜಾಗವನ್ನು ಕಬಳಿಸುವ ಸಲುವಾಗಿ ನಿಪಿ1 ರಂತೆ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಾಗ ನಮ್ಮದು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಚಾಸ–2 ರವರು ಆಸ್ಪತ್ರೆಯಲ್ಲಿ 15 ದಿನ ಒಳರೋಗಿಯಾಗಿ ದಾಖಲಾಗಿದ್ದರು. 15 ದಿನಗಳ ಕಾಲ ಚಾಸ–2 ರವರು ಆಸ್ಪತ್ರೆಯಲ್ಲೇ ಇದ್ದರು ನಮ್ಮ ಗ್ರಾಮಕ್ಕೆ ಬರಲಿಲ್ಲ. ನಿಪಿ1 ರಲ್ಲಿ ದೂರು ತಡವಾದ ಬಗ್ಗೆ ನಮೂದಿಸಿದ್ದೇನೆ. ದೂರು ತಡವಾದ ಬಗ್ಗೆ ಕಾರಣವನ್ನು ನಿಪಿ1 ರಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನಾನು ಓದು ಬರಹ ಕಲಿತಿಲ್ಲ. ನಿಪಿ1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಬೇರೆಯವರು ಬರೆದುಕೊಟ್ಟ ದೂರಿಗೆ ನಾನು ಸಹಿ ಮಾಡಿ ನಾನು ಠಾಣೆಗೆ ನೀಡಿದ್ದೇನೆ ಎಂದರೆ ಸರಿ.

ಸದರಿ ದಿನದಂದು ಚಾಸ–2 ರವರು ದನಕರುಗಳನ್ನು ಕಟ್ಟಿಹಾಕಿರಲಿಲ್ಲ ಮತ್ತು ಆರೋಪಿಗಳು ಆಕೆಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸ–2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಾಗ 1ನೇ ಆರೋಪಿಯ ತಾಯಿಗೆ ಸೇರಿದ ಜಾಗವಾದ್ದರಿಂದ ಆ ಜಾಗವನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಘಟನಾ ಸ್ಥಳದಲ್ಲಿ ಇರಲಿಲ್ಲ ಮತ್ತು ಯಾವುದೆ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಚಾಸ–2 ರವರು ಜಮೀನಿನಲ್ಲಿ ಕೂಲಿ ಮಾಡುತ್ತಾರೆ. ಚಾಸ–2 ರವರು ಕೆಲಸ ಮಾಡುವ ಸಮಯದಲ್ಲಿ ಬಿದ್ದು ಬೆರಳು ಮತ್ತು ತಲೆಗೆ ಗಾಯ ಮಾಡಿಕೊಂಡಿದ್ದಾರೆ

ಎಂದರೆ ಸರಿಯಲ್ಲ. ಆರೋಪಿಗಳು ಮು.ಮಾ.1 ರಿಂದ ಚಾಸ–2 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ಚಾಸ–2 ರವರ ತಾಳಿ ಸಿಕ್ಕಿರುವುದಿಲ್ಲ. ಗಲಾಟೆ ನಡೆದ ಸ್ಥಳದಲ್ಲಿ ಎಷ್ಟು ಜನರು ಇದ್ದರು ಎಂದು ನನಗೆ ನೆನಪಿಲ್ಲ. ಗಲಾಟೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಚಾಸ–3 ಮತ್ತು 4 ರವರು ಸ್ಥಳದಲ್ಲಿ ಇರಲಿಲ್ಲ ಮತ್ತು ಜಗಳ ಬಿಡಿಸಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಮು.ಮಾ.1 ಕ್ಕೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸ–2 ರವರಿಗೆ ಹೆಬ್ಬೆರಳೂ ಮತ್ತು ತಲೆಗೆ ಗಾಯಗಳಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸ–2 ರವರು 15 ದಿನ ಒಳರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ತಾಳಿ ಕಿತ್ತು ಹೋಗಿದ್ದ ಸ್ಥಳದ ಫೋಟೋ ತೆಗೆದಿದ್ದಾರೆ. ತಾಳಿಯ ಕರಿಮಣಿಗಳನ್ನು ಪೊಲೀಸರು ಸಂಗ್ರಹಿಸಿರುವುದಿಲ್ಲ. ಚಾಸ–2 ರವರ ತಾಳಿ ಕಳೆದು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**